GOVERNMENT OF KARNATAKA
(TRANSPORT DEPARTMENT)

No.CT/Comp/PR-92/2017-18

Office of the Commissioner for
Transport & Road Safety,
1st Floor, 'A' Block, TTMC Bldg,
Shanthi Nagar, Bengaluru-560027.
Dated: 01-02-2018.
Ph: 22214900 email: transcom@nic.in

# CIRCULAR

Sub: Legal acceptance of Driving Licence, Registration Certificate & Emission Test Certificate presented through Digilocker Platform on par with original documents - regarding.

***

The Ministry of Electronics and IT (MeitY), Government of India has framed a Digilocker Authority through Notification No. 2016 G.S.R. 711(E), dated 21st July 2016. The Digilocker Authority has launched the Digilocker platform, which is a digital repository of documents and certificates issued to a citizen, linked to his / her AADHAR number.

The Digilocker platform has now the facility to pull a citizen's Driving Licence and Registration Certificate by way of its integration with the Ministry of Road Transport (Morth), Government of India. These digital copies available on Digilocer are mandated as original documents as per the IT Act, 2000.

Further to this, the Government of Karnataka (e-Governance Department) has now linked the State Transport Department with Digilocker, which will enable citizens to download their Driving Licences, Registration Certificates and Emission Certificates to their Digilocker account as Digilocker is linked to the citizen's identity has been authenticated / validated with the help of AADHAR and Department database.

Hence, the Transport Department now notifies that the following digital certificates downloaded by citizens into their Digilocker would be deemed to be the original certificates and would be treated on par with certificates issued by the Department in the form of Smart Card or Paper Form

1) Driving Licence
2) Registration Certificate
3) Emission Certificate

However, the above Notification doesnot apply to cases where Driving Licence (DL) or Registration Certificate (RC) have to be seized by Law Enforcement Authorities as per Motor Vehicles Act and Rules.

Commissioner for Transport &
Road Safety, Bengaluru.

To,

1) All the Additional Commissioner for Transport, Joint Commissioner for Transport, Deputy Commissioner for Transport & Sr. Regional Transport Officers, Regional Transport officers, Assistant Regional Transport Officers of the State.
2) The Joint Commissioner for Transport (Environment & e-Governance) to publish circular in Department website.
3) The Deputy General of Police and Inspector General of Police, Bengaluru.
4) The Commissioner for Police, Infantry Road, Bengaluru.
5) The Enforcement Authorities, Police Department, Bengaluru.

ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ.ಸಾಆ/ಗಣಕ/ವೈವ-92/2017-18

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ,
ಕೆ.ಹೆಚ್. ರಸ್ತೆ ಶಾಂತಿನಗರ, ಬೆಂಗಳೂರು-27.
ದಿನಾಂಕ: 01-02-2018. ದೂ:080-22214900
ಮಿಂಚಂಚೆ: transcom@nic.in.

**ಸುತ್ತೋಲೆ**

ವಿಷಯ: Digilocker ನಲ್ಲಿ ಅಡಕವಾದ ಚಾಲನಾ ಅನುಜ್ಞಾ ಪತ್ರ, ವಾಹನ ನೋಂದಣಿ ಪ್ರಮಾಣ ಪತ್ರ ಮತ್ತು ವಾಯುಮಾಲಿನ್ಯ ಪ್ರಮಾಣಪತ್ರಗಳನ್ನು ಮೂಲ ದಾಖಲೆಗಳಿಗೆ ಸಮಾನವಾಗಿ ಕಾನೂನಾತ್ಮಕವಾಗಿ ಅಂಗೀಕರಿಸುವ ಕುರಿತು.

***

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಾಜ್ಞಾನಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ.ಜಿ.ಎಸ್.ಆರ್. 711(ಇ) 2016, ದಿನಾಂಕ:21-7-2016ರಲ್ಲಿ Digilocker ನ ಪ್ರಾಧಿಕಾರವನ್ನು ರಚಿಸಿರುತ್ತದೆ. ಸದರಿ ಪ್ರಾಧಿಕಾರವು Digilocker ವೇದಿಕೆಯನ್ನು (Platform) ಪ್ರಾರಂಭಿಸಿದ್ದು, ಅದು ನಾಗರೀಕರಿಗೆ ನೀಡಲಾಗುವ ದಾಖಲೆಗಳು ಮತ್ತು ಪ್ರಮಾಣ ಪತ್ರಗಳ ಡಿಜಿಟಲ್ ರೂಪದ ಸಂಗ್ರಹ ತಾಣವಾಗಿದ್ದು, ನಾಗರೀಕರ ಆಧಾರ್ ಸಂಖ್ಯೆಗೆ ಜೋಡಿಸಲ್ಪಟ್ಟಿರುತ್ತದೆ.

ಪ್ರಸ್ತುತ Digilocker ವ್ಯವಸ್ಥೆಯು ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರ ಸಂಯೋಗದೊಂದಿಗೆ ಯಾವುದೇ ಒಬ್ಬ ನಾಗರೀಕನ ಚಾಲನಾ ಅನುಜ್ಞಾಪತ್ರ ಮತ್ತು ವಾಹನ ನೋಂದಣಿ ಪ್ರಮಾಣಪತ್ರಗಳನ್ನು ಪಡೆಯುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಪ್ರಕಾರ, Digilocker ನಲ್ಲಿ ಲಭ್ಯವಾಗುವ ದಾಖಲೆಗಳ ಪ್ರತಿಗಳು ಮೂಲ ದಾಖಲೆಗಳಂತೆ ಮಾನ್ಯ ಮಾಡಲ್ಪಡುತ್ತದೆ.

ಇದಲ್ಲದೆ, ಕರ್ನಾಟಕ ಸರ್ಕಾರವು (ಇ-ಆಡಳಿತ ಇಲಾಖೆ) ರಾಜ್ಯ ಸಾರಿಗೆ ಇಲಾಖೆಯನ್ನು Digilocker ವ್ಯವಸ್ಥೆಯೊಂದಿಗೆ ಸಂಪರ್ಕ ಕಲ್ಪಿಸಿದ್ದು, Digilocker ವ್ಯವಸ್ಥೆಯನ್ನು ನಾಗರೀಕರ ಗುರುತಿಗೆ ಹೊಂದಿಸಿದ್ದು, ಅದನ್ನು ಆಧಾರ್ ಮತ್ತು ಸಾರಿಗೆ ಇಲಾಖೆಯ ಡೇಟಾಬೇಸ್ ಸಹಾಯದಿಂದ ಪರಿಶೀಲಿಸಿ / ಪ್ರಮಾಣೀಕರಿಸಿರುವುದರಿಂದ ನಾಗರೀಕರು ಚಾಲನಾ ಅನುಜ್ಞಾಪತ್ರ, ವಾಹನ ನೋಂದಣಿ ಪ್ರಮಾಣಪತ್ರ

---2

ಮತ್ತು ವಾಯುಮಾಲಿನ್ಯ ಪ್ರಮಾಣಪತ್ರಗಳನ್ನು ಅವರವರ Digilocker ಖಾತೆಗೆ ಸೇರ್ಪಡೆ (Download) ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಆದ್ದರಿಂದ, ನಾಗರೀಕರು ಈ ಕೆಳಕಂಡ ಡಿಜಿಟಲ್ ರೂಪದ ಪ್ರಮಾಣಪತ್ರಗಳನ್ನು Digilocker ನಲ್ಲಿ ಸೇರ್ಪಡೆ(Download) ಮಾಡಿದ್ದಲ್ಲಿ ಅಂತಹ ದಾಖಲೆಗಳನ್ನು ಸಾರಿಗೆ ಇಲಾಖೆಯಿಂದ ನೀಡಲಾಗಿರುವ ಸ್ಮಾರ್ಟ್ ಕಾರ್ಡ್ ಅಥವಾ ಕಾಗದ ರೂಪದಲ್ಲಿನ ಮೂಲ ದಾಖಲೆಗಳಂತೆಯೇ ಸಮಾನವಾಗಿ ಪರಿಗಣಿಸಲು ಸಾರಿಗೆ ಇಲಾಖೆಯು ಈ ಮೂಲಕ ತಿಳಿಯಪಡಿಸಿದೆ.

1) ಚಾಲನಾ ಅನುಜ್ಞಾಪತ್ರ
2) ವಾಹನ ನೋಂದಣಿ ಪ್ರಮಾಣಪತ್ರ
3) ವಾಯುಮಾಲಿನ್ಯ ಪ್ರಮಾಣಪತ್ರ

ಆದರೆ, ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳನ್ವಯ ಪ್ರವರ್ತನ ಪ್ರಾಧಿಕಾರಿಗಳು ಕಾನೂನು ರೀತ್ಯ ಚಾಲನಾ ಅನುಜ್ಞಾಪತ್ರ ಅಥವಾ ವಾಹನ ನೋಂದಣಿ ಪ್ರಮಾಣಪತ್ರಗಳನ್ನು ಜಪ್ತಿಪಡಿಸಬೇಕಾದ ಪ್ರಕರಣಗಳಲ್ಲಿ ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳು ಅನ್ವಯವಾಗುವುದಿಲ್ಲ.

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಇವರಿಗೆ

1) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಜಂಟಿ ಸಾರಿಗೆ ಆಯುಕ್ತರು, ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ/ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಜಂಟಿ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಆಡಳಿತ) ಬೆಂಗಳೂರು ಇವರಿಗೆ ಸದರಿ ಸುತ್ತೋಲೆಯ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.
3) ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಬೆಂಗಳೂರು.
4) ಪೊಲೀಸ್ ಆಯುಕ್ತರು, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು
5) ಪ್ರವರ್ತನ ಪ್ರಾಧಿಕಾರಗಳು, ಪೊಲೀಸ್ ಇಲಾಖೆ, ಬೆಂಗಳೂರು.